ಅಧ್ಯಕ್ಷರ ಅನುಮತಿಯಿಂದ ಮಹತ್ವ ವಿಷಯದ ಬಗ್ಗೆ ಪ್ರಸ್ತಾಪ

ನ್ಯಾಯಧೀಶ ಪುಟ್ಟಸ್ವಾಮಿಯವರ ರಾಜೀನಾಮೆ ಕುರಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಇದನ್ನು ನಾನು ಕೇಳುತ್ತಿರುವ ಕಾರಣ ಏನೆಂದರೆ The reasons given by Justice Puttaswamy for his resignation from the one man Commissionconstituted by the Government toprob into the M-D. seat scandal ಅದಕ್ಕೆ ಉತ್ತರವೇನೆಂದರೆ They have replied, Justice Mr. Puttaswamy tendered the resignation due to the controversy arising out of a newspaper edito and certain statements made questioning his impartiality ಆದರೆ ಅನೇಕ ಸಲ ಈಸದನದಲ್ಲಿ ತಮಗೂ ಕೂಡ ಗೊತ್ತಿರುವಂತೆ ಮಾನ್ಯ ಮುಖ್ಯ ಮಂತ್ರಿಗಳಾಗಲೀ, ಅಥವಾ ನಾವಾಗಲಿ ಅನೇಕಸಲ ಏನು ವಾದ ವಿವಾದಗಳನ್ನು ಮಾಡುತ್ತೇವೆ ಅದು ಪೇಪರ್‌ನಲ್ಲಿ ಬರುತ್ತದೆ. ಆದರೆಅವೆಲ್ಲವು ಕೂಡ ಸತ್ಯವಾಗುವುದಿಲ್ಲ ಅದನ್ನು ನಂಬಿಕೊಂಡು ಇಲ್ಲಿ ಕೇಳತಕ್ಕಂಥ ಅಗತ್ಯವು ಕೂಡ ಇಲ್ಲವೆಂದು ಹೇಳಿದ್ದು ಇರುತ್ತದೆ. ಈವತ್ತು ಇಂಡಿಯನ್ ಎಕ್ಸ್‌ಪ್ರೆಸ್ ಎಡಿಟೊರಿಯಲ್ ಕಾಲಮ್‌ನಲ್ಲಿ ಬರೆದಿರತಕ್ಕಂಥದ್ದು ಅವರು ರೆಸಿಗ್‌ನೇಷನ್, ಕೊಟ್ಟಿದ್ದಾರೆ ಎನ್ನುವ ಮಾತನ್ನು ನಾನು ಒಪ್ಪುವುದಿಲ್ಲ ಏತಕ್ಕೆಂದರೆ ಇವತ್ತು ನಾನು ನೇರವಾಗಿ ಒಂದು ತರಹ ಸರ್ಕಾರದವರೇ ಈ ರೀತಿಯಾಗಿ ಒತ್ತಡವನ್ನು ತಂದು ಅವರಿಗೆ ರಿಸೈನ್ ಮಾಡತಕ್ಕಂಥ ಒತ್ತಡ ತಂದಿದ್ದಾರೆ. ತಮಗೆಬೇಕಾದಂಥವರಿಗೆ ಅಪಾಯಿಂಟ್ ಮಾಡಿಕೊಂಡು ತಮ್ಮ ಪರವಾಗಿ ನಿರ್ಣಯ ಬರುವಂತೆ ಮಾಡಿಕೊಳ್ಳುವ ಸಲುವಾಗಿ ಹೊಸದಾಗಿ ಕುಡೂರ್ ಆಯೋಗ ನೇಮಕ ಮಾಡಿದ್ದಾರೆ.

Sri B. Rachaiah.—This amounts to insinuation.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ, ನೇರವಾಗಿ ಪ್ರಶ್ನೆಯನ್ನು ಕೇಳಿ. ಏತಕ್ಕೆ ಸುತ್ತು ಹಾಕುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಲ್ಲೂ ಹೋಗಿಲ್ಲ. I am telling straight.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ ನಾನು ಹೇಳುವುದು ಇಷ್ಟೇ, ಸಪ್ಲಿಮೆಂಟರಿ ಪ್ರಶ್ನೆಗಳನ್ನು ಮಾನ್ಯ ಖರ್ಗೆಯವರು ಕೇಳಲಿ. ಅದಕ್ಕೆ ನನ್ನ ಆಭ್ಯಂತರವೇನೂ ಇಲ್ಲ. ಸಪ್ಲಿಮೆಂಟರಿ ಪ್ರಶ್ನೆಯನ್ನು ಕೇಳುವ ಸೋಗಿನಲ್ಲಿ insinuation reflection. ಆರೋಪ ಮಾಡಲಿಕ್ಕೆ ಬರುವುದಿಲ್ಲ. ತಾವು ಪ್ರಶ್ನೆ ಕೇಳುತ್ತೀರಿ, ಸರ್ಕಾರದವರು ಜಸ್ಟೀಸ್ ಪುಟ್ಟಸ್ವಾಮಿಯವರಮೇಲೆ ಒತ್ತಾಯ ಬರುವಂತೆ ಜಸ್ಟೀಸ್ ಪುಟ್ಟಸ್ವಾಮಿಯವರನ್ನು ನಾವು ಎಂದು ಒತ್ತಾಯಪೂರ್ವಕವಾಗಿ ನೇಮಕ ಮಾಡಲಿಲ್ಲ. ಜಸ್ಟೀಸ್ ಪುಟ್ಟಸ್ವಾಮಿ ಆಯೋಗ ಯಾವ ಬೇಸೀಸ್‌ಮೇಲೆ ಎನ್‌ಕ್ವೈರಿ ಮಾಡುತ್ತಿದೆ, ಆ ಎನ್‌ಕ್ವೈರಿ ಎಷ್ಟುದಿವಸ ವಿಳಂಬವಾಯಿದ್ದು ಏತಕ್ಕೆಂದೂ ಕೂಡ ನಾವು ಕೇಳಿಲಿಲ್ಲ. ನಾವುಇದಕ್ಕೂ ಹೆಚ್ಚಿನ ವಿಚಾರ ಇಲ್ಲಿ ಹೇಳುವ ಅಗತ್ಯವಿಲ್ಲ. ಜಸ್ಟೀಸ್ ಪುಟ್ಟಸ್ವಾಮಿಯವರ ಪತ್ರವನ್ನು ನಾನು ಇಲ್ಲಿ ಓದಿ ಹೇಳಿಬಿಡುತ್ತೇನೆ. ಆ ದಿವಸ ನಾನು ಹೇಳಿದಾಗ ವಿರೋಧ ಪಕ್ಷದ ನಾಯಕರು, ಉಪನಾಯಕರು ಮತ್ತು ಇನ್ನಿತರ ಸ್ನೇಹಿತರು ಒಪ್ಪಲಿಲ್ಲ. ಈ ಆರೋಪ ಆರೋಗ್ಯ ಇಲಾಖೆಗೆ ಸಂಬಂಧಪಟ್ಟದ್ದು. ಆ ಇಲಾಖೆ ನೇಮಕ ಮಾಡಿದ್ದು. ಅವರಿಗೆ ತಮ್ಮ ರಾಜೀನಾಮೆಯನ್ನು ಕಳುಹಿಸಿದ್ದಾರೆಂದು ಹೇಳಿದನ್ನು ತಾವು ಒಪ್ಪಲಿಲ್ಲ. ಈಗ ಆ ಪತ್ರ ಓದುತ್ತೇನೆ.—

"To
The Secretary to Government,
Dept. of Health & Family Welfare,
Multistoreyed Building,
III Stage, I Floor, Bangalore.

Sir,

In Notification dated 22-11-1985 Government of Karnataka had appointed me as one Commission of Inquiry in to the

matters referred to in that Notification and submit my report to Government. The term of the Commission which was extended from time to time, is due to expire on 30-6-1988.

While continuing as the Commission of Inquiry certain events developed and on those developments which have been dealt by me in my order dated 27-4-1988, I have decided to quit. In enclosing a copy of that order which sets out my reasons, I hereby voluntarily tender my resignation to the Commission of Inquiry I request you kindly to move the Governmnt to accept my resignation and relieve of my responsibilities with expedition.

I thank the Government of Karnataka for the confidence it had reposed in me. I sincerely regret for my failure to complete the task entrusted to me.

On hearing from you the modalities for transmission of records will be decided."

In the operative portion of the order, Mr. Justice Puttaswamy has set out the reasons for his resignation. I am reading the relevant portion which reads thus:

" As a human Judge, I naturally took note of the editorial and seriously reflected on the same. On such serious reflection and on my own I decided to state my own views on the same when the Commission meets on 13-2-1988.

Even before referring to other developments that ensued on this editorial, it is nessary to state at the very outset that before writing the editorial neither the editor of the daily nor any of its correspondent had met me and had ascertained the facts from me which I would have very willingly furnished.

On 13-2-1988 the Commission sat at the appointed time and place. When the Commission so sat, an application was meac on behalf of DW-1 to grant an adjournment on the ground of his illness, which I granted by an order made in that behalf. After that, in accordance with the earlier understanding, Sri Jaisingani, learned Advocate for Sriyuths Bharath Hegde, S. M. Udayashankar and B. R. Nagaraj stated that he had in attendence two more witnesses and that he would examine them on that and the following day. Wihtout commencing the recording of the evidence of the other witnesses, I read out a written note which I had prepared on my own. That note prepare and read out by me on that day which is part of the Commission records reads thus:

Indian Express (Bangalore Edition) in its editorial on 9-2-1988 under the title "Mr. Puttaswamy resign" had demanded my resignaton as a Judge of the Karnataka High Court and this Commission

of Inquiry for the reasons stated therein. With reference to the same, I propose to state my views as hereunder:

I was appointed as a permanent Judge of the Karanataka High Court from 27-11-1977. when so functioning. on the recommendation of the then Chief Justice of the High Court, and with the approval of the President of India, I was appointed as a Commission of Inquiry by the Government of Karnataka under the Commission of Inquiry Act. 1952 (Central Act No.60 of 1952) to probe into the matters referred to in Notification No.HFW 217 MSF 86 dated 22-11-85 popularly called as "M. D. Seat Scandal." The term of the Commission of Inquiry has been extended upto 30-6-1988.

While functioning in the High Court. under the Administrative Tribunals Act 1985 (' the A. T. Act '), I was appointed by the President of India as the Vice-Chairman of the Bangalore Bench of the Central Administrative Tribunal I assumed charge as Vice-Chairman on 1-9-1986 and I am functioning in that capacity then.

On my accepted date of birth, I have retired as a permanent Judge of the High Court from 7-2-1988. But by virtue of the appointment made by the President. I am continuing as the Vice Chairman of Bangalore Bench of the Central Administrative Tribunal from 8-2-1988. Under the Administrative Tribunal Act, the Rules framed thereunder and the orders made by the President, I am entitled to continue as Vice-Chairman till 7-2-1991. The Customs and Excise Revenues Appellate Tribunal Act, 1986 provides for the constitution of a Customs and Excise Revenues Appellate Tribunal. The Act has not been brought into force and therefore, Tribunal thereunder has not also been constituted. I have not so far been appointed as the president of that Tribunal. All that has happened under this Act, as far as I am concerned is, that Government of India in the Ministry of Finance had sought my willingness for appointment as the president of the Customs and Excise Revenue Appellate Tribunal, to which I have expressed my willingness.

I cannot say whether I will be appointed at all and if appointed also, I will accept the same. Even Now, I am having a second thought on this proposal. In real terms, that appointment does not confer any great benefit to me. If I am appointed to that post, my pay will be Rs.9000/- as against Rs.8000/- I am now drawing.

I have no comments to make on the editorial written in "The Indian Express" issue dated 9th February 1988, under the caption "Mr. Justice Puttaswamy, resign." I do not also propose to enter into any controversy on this editorial. or other news items appearing in that paper or other newspapers also.

With all sincerity and humility, I state that I have not done anything improper in my capacity as a Judge, Vice-Chairman or as the Commission of Inquiry. I sincerely believe that I have not deviated from the chosen path and the standards I am expected to maintain of them. But that is also a matter for God and others to Judge.

In doing my work as Commission of Inquiry, I have not and I am not receiving any extra remuneration or any other kind of benefit from Government of Karnataka. I am doing this extra work virtually on holidays. I have no comment to make on the work I have done so far.

I am continuing as the Commission of Inquiry only because Government of Karnataka under the 1952 Act had so appointed me and I have accepted that responsibility. I am not anxious to continue as the commission of Inquiry. I will be very happy if Government were to relieve me of this heavy responsibility even now.

As I have retired as a Judge of the Karnataka High Court from 7-2-1988, the question of my tendering resignation to the said post does not arsise.

So far, I have not been appointed as the president of the Customs and Excise Revenue Appellate Tribunal. Whether I will be appointed as the president of the same, and if so appointed, whether I will accept the same, and take up that assignment, is too early to say.

On the facts stated above, in my humble view the demand for tendering my resignation, 'as Commissioner or to the Commission of Inquiry' is not Justified. I, therefore do not consider it proper to do so only on these grounds But, if any of the parties to the proceedings even now, do not want me to continue as the Commission of Inquiry, I will not undertake any further work and I assure them and others also to move the Government of Karnataka to relieve me from my burden.

Except for the above, I have nothing more to say on what has been written in the editorial of the 'The Indian Express' on its demand for my resignation and other news items in that paper and other papers like 'Lankesh Patrika' I have stated this only to keep the record straight. I do not seek for the publication of this Note read by me before the commencement of today's "proceedings. But if it is to be published by newspapers and other media, I have no objection for the same." After I read this statement, while Sri Ravivarma Kumar, learned Advocate appearing for Sri C. P. Bharathan and Sri A. K. Subbaiah stated

that I should continue my work. But, Sriyuths Jaisinghani and N. Santosh Hegde, learned Advocate appearing for Sri Ramakrishna Hegde, Chief Minister of Karnataka sought for time to reflect on my note and state their views. On that and the events that ensued on that day, I recorded thus.

Commission sat at 10.30 A. M., today.

Appearances of the counsel and the parties as on 24-1-1988.

Sri S. B. Jaisinghani, learned counsel for Sri Bharath Hegde, files an application praying for postponement of the recording of evidence of Defence Witness-1 on the ground that he is unwell which fact is also supported by a medical certificate issued by one Dr. B. Ramana Rao. I have no reason to doubt the correctness of the statement made in this application. In these circumstances, it is necessary to postpone the recording of evidence of Defence Witness-1 to a date which is convenient to all the parties and unsel...

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಫೋನ್‌ಪ್ಲೋನ್ ಮಾಡುವುದಕ್ಕೆ ಎರಡು ಪಾರ್ಟಿಗಳಲ್ಲಿ ಯಾರದರೂ ಅಬ್ಜೆಕ್ಷನ್ ಮಾಡಿದರೆ ಈ ಸ್ಥಾನದಲ್ಲಿ ಇರುವುದಿಲ್ಲವೆಂದು ಅವರು ಹೇಳಿದ್ದಾರೆ. ಇಲ್ಲಿ ನಿಮ್ಮ ಪರವಾಗಿ ಇರತಕ್ಕ ಅಡ್ವೊಕೇಟ್‌ರವರು ಅಬ್ಜೆಕ್ಷನ್ ಮಾಡಿದರು ಎಂದು ಪತ್ರಿಕೆಯಲ್ಲಿ ಬಂದಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ನಿಮ್ಮ ಬಾಯಿಯಲ್ಲಿ ಪತಕ್ಕೆ ಹೇಳುತ್ತೀರಿ, ಜಯ ಸಿಂಘಾನಿಯವರಾಗಲಿ, ಬೇರೆ ಅಡ್ವೊಕೇಟ್ ಆಗಲಿ, ಇದನ್ನು ಸಂಪೂರ್ಣವಾಗಿ ನಿಮಗೆ ಬಿಟ್ಟಿದ್ದೇವೆ, ನಿಮಗೆ ಏನು ಯೋಗ್ಯ ಅನ್ನಿಸುತ್ತದೆ ಹಾಗೆ ಮಾಡಿ, ಸುಬ್ಬಯ್ಯನವರು ಆರೋಪ ಮಾಡಿ, ನಿಮ್ಮ ಮಗನಿಗೆ ಲೈಸೆನ್ಸ್ ಕೇಳಿದ್ದೀರಿ, ಸರ್ಕಾರದ ಮೇಲೆ ಪ್ರಭಾವ ಬೀರಿದ್ದೀರಿ, ಎಂಬ ಆರೋಪ ಮಾಡಿದ್ದಾರೆ. ಅದಕ್ಕಾಗಿ ಜಸ್ಟೀಸ್ ಪುಟ್ಟಸ್ವಾಮಿಯವರು, ಸುಬ್ಬಯ್ಯನವರು ಮಾಡಿದ ಆರೋಪದಿಂದ ರಾಜೀನಾಮೆ ನೀಡಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ವಿಲಿಂಗಲಿ ಹೋಗುವುದಕ್ಕೆ ಅವರು ರೆಡಿ ಇರಲಿಲ್ಲ. ಎರಡು ಪಾರ್ಟಿಯಲ್ಲಿ ಯಾರಾದರೂ ಅಬ್ಜೆಕ್ಷನ್ ಮಾಡಿದರೆ ಬಿಟ್ಟು ಬಿಡುತ್ತೇವೆಂದು ಹೇಳಿದರು. ಸುಬ್ಬಯ್ಯನವರು ಇದಕ್ಕೆ ಸಂಬಂಧಪಟ್ಟಂತೆ ಪೇಳಿಲ್ಲ.

ಶ್ರೀ ಎಂ. ವೀರಪ್ಪ ಮೊಯಲಿ.—ಸುಬ್ಬಯ್ಯನವರು ಅಬ್ಜೆಕ್ಷನ್ ಮಾಡಿದ್ದು ಬೇರೆ ವಿಚಾರ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಜೇಠ್ ಮಲಾನಿಯವರು ಬಹಿರಂಗವಾಗಿ ಅಬ್ಜೆಕ್ಷನ್ ಮಾಡಿದ್ದು, ಪತ್ರಿಕೆಗಳಲ್ಲಿ ಬಂದಿದೆ. ಅವರು ಹೇಳಿದ ಮೇಲೆ ಎರಡು ಪಾರ್ಟಿಯಲ್ಲಿ ಯಾರೊಬ್ಬರು ಹೋಗುತ್ತೇವೆಂದು ಹೇಳಿದರು. ಜೇಠ್ ಮಲಾನಿಯವರು ಹೇಳಿದ ಮೇಲೆ, ಪ್ರೊಸಿಡಿಂಗ್ಸ್‌ನಲ್ಲಿ ಬರದ ಹಾಗೆ ಕ್ರಮ ತೆಗೆದುಕೊಂಡಿದ್ದಾರೆ. ಯಾರು ನ್ಯಾಯವಾಗಿ ಕೆಲಸ ಮಾಡುತ್ತಿದ್ದರು, ಅವರನ್ನು ತೆಗೆಸಿ ನಿಮಗೆ ಬೇಕಾದಂತವರನ್ನು ನೇಮಕ ಮಾಡಿದ್ದಾರೆಂದು ಜನ ಸಂಶಯಪಡುತ್ತಿದ್ದಾರೆ. ಅದಕ್ಕೆ ನ್ಯಾಯಪೂರ್ಣವಾಗಿ ಸೀಮಿತವಾಗಿ ಜ್ಯುಡಿಷಿಯಸ್ ಆಗಿ ಕೆಲಸ ಮಾಡುವವರನ್ನು ಬಿಟ್ಟು ಹೊಸದಾಗಿ ನೇಮಕ ಮಾಡಿರುವುದು ಸರಿಯಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅನಾವಶ್ಯಕವಾಗಿ ಈ ತರಹ ಎಕ್ಸ್‌ಪೆಷನ್ ಮಾಡತಕ್ಕದ್ದು ಯೋಗ್ಯವಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ನಾವು ಮಾಡಲಿಲ್ಲ, ನೀವೇ ಮಾಡುತ್ತಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಜಸ್ಟೀಸ್ ಕುದೂರ್‌ರವರ ಮಗ ಸಂತೋಷ ಹೆಗಡೆ ಅವರು ಪ್ರಾರಂಭ ಮಾಡಿದ ಲಿಗಲ್ ಫರ್ಮ್‌ನಲ್ಲಿ ಪಾರ್ಟನರ್ ಆಗಿದ್ದಾರೆಂದು ಸುಬ್ಬಯ್ಯನವರು ಆರೋಪ ಮಾಡಿದ್ದಾರೆ, ಸ್ಟೇಟ್‌ಮೆಂಟ್ ಮಾಡಿದ್ದಾರೆ. ಆದರೆ ಸಂತೋಷ ಹೆಗಡೆಯವರ ಫರ್ಮ್‌ಗೂ ಕುದೂರ್‌ರವರ ಮಗನಿಗೂ ಯಾವುದೇ ರೀತಿಯ ಸಂಬಂಧವಿಲ್ಲ. ಸಂತೋಷ್ ಹೆಗಡೆಯವರ ಹೆಂಡತಿ ಕೂಡ ಅಡ್ವೋಕೇಟ್ ಇದ್ದಾರೆ. ಈ ಫರ್ಮ್‌ಗೂ ಅವರಿಗೂ ಯಾವುದೇ ರೀತಿಯ ಸಂಬಂಧವಿಲ್ಲ. ಕುದೂರ್ ಅವರ ಮಗ ಅಡ್ವೋಕೇಟ್ ಇದ್ದಾರೆ, ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಆರಾಕ್ ಸ್ಕ್ಯಾಂಡಲ್ ಅಥವಾ ಆ ಬಾಟ್ಲಿಂಗ್‌ಗೋ ಏನೋ ಇದೆಯಲ್ಲ ಅದರಲ್ಲಿ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್‌ನಲ್ಲಿ ಅವರು ಪಿಟಿಷನರ್ ಪರವಾಗಿ ವಕೀಲರು. ಈಗಲಾದರೂ ನಿಮ್ಮ ಮನಸ್ಸಿಗೆ ಸಮಾಧಾನವಾಗುತ್ತದೆಯೇ ? ಅನಾವಶ್ಯಕವಾಗಿ ಏಕೆ ಬೇರೆಯವರ ಮೇಲೆ ಇದನ್ನು ಮಾಡುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ ಪ್ರಶ್ನೆ ಏನೆಂದರೆ.....

ಅಧ್ಯಕ್ಷರು.—ಸಾಕು. ಇಲ್ಲಿಯವರೆಗೆ ಪ್ರಸ್ತಾಪ ಆಗಿರುವುದು ಸಾಕು. Let it be closed.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಪ್ರೊಸೀಡಿಂಗ್ಸ್ ಓದಿದ್ದೀರಿ. ನಾನು ಹೇಳುವುದು ಇಷ್ಟೆ. ಎರಡೂ ಪಾರ್ಟಿಯ ಯಾರೇ ಆಬ್ಜೆಕ್ಟ್ ಮಾಡಿದರೂ ಈ ಸ್ಥಾನದಲ್ಲಿ ಇರುವುದಿಲ್ಲ ಎಂದು ಅವರು ಹೇಳಿದ್ದಾರೆ. ಅದಕ್ಕೆ ಇವರು ಆಬ್ಜೆಕ್ಟ್ ಮಾಡಿ ತೆಗೆದಿದ್ದರೆ ಅನ್ನುವ ವಾದ ನಮ್ಮದು. ನಮ್ಮ ವಾದವೆಂದರೆ ಜೇಠ್‌ಮಲಾನಿಯವರು ಆಬ್ಜೆಕ್ಟ್ ಮಾಡಿ ಇವರು ಇರತಕ್ಕದ್ದು ಯೋಗ್ಯವಲ್ಲ ಎಂದು ಬಿಟ್ಟಿದ್ದಾರೆ. ಸಬ್ಸಿಕ್ವೆಂಟ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ಪೇಪರ್, ಆಮೇಲೆ ಅಲ್ಲಿ ಇಲ್ಲಿ ಎಲ್ಲಾ ಬಂದಿದೆ.

ಶ್ರೀ ರಾಮಕೃಷ್ಣ ಹೆಗಡೆ.—This is far from the truth. ಆ ದಿವಸ ಯಾರು ಯಾರು ಏನೇನು ಹೇಳಿದ್ದಾರೆ ಎನ್ನುತಕ್ಕದ್ದು ಪೇಪರ್‌ನಲ್ಲಿ ಹಾಕಿದ್ದಾರೆ. ದಯವಿಟ್ಟು ಇನ್ನೊಂದು ಸಲ ಓದಿ.

ಅಧ್ಯಕ್ಷರು.—This matter is closed. ಅವರು ಉತ್ತರ ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇದಕ್ಕೆ ಒಂದು ಸಂಶಯ ಇವತ್ತು ಬರುತ್ತಾ ಇದೆ. ತಾವು ಹೊಸದಾಗಿ ಏನು ಕಮಿಷನ್... ಪಾಪ ಕುದೂರ್ ಅವರ ಬಗ್ಗೆ ನಮಗೆ ಏನೂ ಇಲ್ಲ. ಅವರು ಒಳ್ಳೆಯ ಮನುಷ್ಯರು ಹಾಗೂ ರೆಪ್ಯುಟೆಡ್ ಜಡ್ಜ್ ಇದ್ದಾರೆ. ಆದರೆ ಈ ಸರ್‌ಕಮ್‌ಸ್ಟ್ಯಾನ್ಸ್‌ನಲ್ಲಿ ಈ ಸಂದರ್ಭದಲ್ಲಿ ಅವರನ್ನು ನೇಮಕ ಮಾಡಿ ಆ ಒಂದು ಏನಪ್ಪ ಎಂದರೆ ನ್ಯಾಯಪೂರ್ಣವಾಗಿ.....

ಅಧ್ಯಕ್ಷರು.—ಏನಾದರೂ ಕ್ಲಾರಿಫಿಕೇಷನ್ ಇದ್ದರೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತೋಗತಕ್ಕದ್ದಕ್ಕೆ ತಾಪತ್ರಯವಾಯಿತು. ಅದಕ್ಕೆ ನಾನು ನೇರವಾಗಿ ಕೇಳುತ್ತೇನೆ. ಇದು ಸಂಶಯಕ್ಕೆ ಆಸ್ಪದವಾಗಿದೆ, ಈ ಹೊಸ ಕಮಿಷನ್ನಿನ ಬಗ್ಗೆ. ಅದಕ್ಕೆ ತಾವು ಪುನರ್ ವಿಮರ್ಶೆ ಮಾಡಿ ಈಗ ಸಿಟ್ಟಿಂಗ್ ಜಡ್ಜ್ ಯಾರು ಇದ್ದಾರೆ ಅವರ ಪೈಕಿ ಯಾರನ್ನಾದರು ನೇಮಕ ಮಾಡುತ್ತೀರಾ ? ಈಗಾಗಲೇ 2½ ವರ್ಷಗಳು ಆಗಿ ಹೋಗಿದೆ. ಹೀಗೇ ಹೋದರೆ ನ್ಯಾಯ ಸಿಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗ್ಡೆ.—ಈಗ ಇವರ ಮನಸ್ಸಿನಲ್ಲಿ ಏನು ಸಂದೇಹ ಇದೆ ಅದನ್ನು ನಿವಾರಣೆ ಮಾಡುವುದಕ್ಕೆ ಬ್ರಹ್ಮನಿಂದಲೂ ಸಾಧ್ಯವಿಲ್ಲ. ಏಕೆಂದರೆ ಇವರ ಸಂದೇಹಕ್ಕೆ ಆಧಾರವೇ ಇಲ್ಲ. ಒಂದೆರಡು ಕೇಸ್‌ಗಳಲ್ಲಿ ಬಿಟ್ಟು ಇಷ್ಟು ದಿವಸ ಸಿಟ್ಟಿಂಗ್ ಜಡ್ಜ್‌ಗಳನ್ನೇ ನೇಮಕ ಮಾಡಿದ್ದೇವೆ. ಈಗ ಸಿಟ್ಟಿಂಗ್ ಜಡ್ಜ್ ನೇಮಕ ಮಾಡುವುದಕ್ಕೆ ಬರುವುದಿಲ್ಲ. ಈ ಬಗ್ಗೆ ಸುಪ್ರೀಮ್ ಕೋರ್ಟಿನ ಒಂದು ರೂಲಿಂಗ್ ಆಗಿದೆ. ಕಮಿಷನ್ ಆಫ್ ಎನ್‌ಕ್ವೈರಿಗೆ ಯಾವುದೇ ಸಿಟ್ಟಿಂಗ್ ಜಡ್ಜ್‌ಗಳನ್ನು ನೇಮಿಸಕೂಡದು ಎಂದು ರೂಲಿಂಗ್ ಬಂದಿದೆ. ಸಿಟ್ಟಿಂಗ್ ಜಡ್ಜ್ ನೇಮಕ ಮಾಡಬೇಕಾದರೆ ಕೆಲವು ಕಂಡಿಶನ್‌ಗಳು ಬೇಕಾಗುತ್ತದೆ ಹಾಗೂ ಪ್ರೆಸಿಡೆಂಟರ ಸ್ಯಾಂಕ್ಷನ್ ಆಗಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಿಂದೆ ಬಿರ್ಲಾ ಸಿಟಿಂಗ್ ಜಡ್ಜ್‌ಗಳನ್ನೇ ಹಾಕಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಆದರೆ ಈಗ ಮಾಡುವುದಕ್ಕೆ ಬರುವುದಿಲ್ಲ. ಸುಪ್ರೀಮ್ ಕೋರ್ಟ್ ನವರು ಆಗಲೇ ಹೇಳಿದ್ದಾರೆ. ಸಿಟಿಂಗ್ ಜಡ್ಜಸ್ ನೇಮಕ ಮಾಡಬಾರದು ಎನ್ನುವ ಪಾಲಿಸಿ ಬಗ್ಗೆ ಸುಪ್ರೀಮ್ ಕೋರ್ಟ್‌ನವರು ಅಭಿಪ್ರಾಯಪಟ್ಟಿದ್ದಾರೆ.

MR. SPEAKER.—This question & reply is over. It is closed. ಈಗ ಗಮನ ಸೆಳೆಯುವ ಸೂಚನೆ ಬಗ್ಗೆ ಪ್ರಸ್ತಾಪ. ನಿಮಗೆ ಇನ್ನೂ ಅವಕಾಶ ಬೇಕೆಂದರೆ ಅರ್ಧ ಗಂಟೆ ಚರ್ಚೆಗೆ ತಾವು ನೋಟೀಸ್ ಕೊಡಿ. ಮುಂದೆ ನೋಡೋಣ. The reply has been given and the matter has been closed.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮುಖ್ಯಮಂತ್ರಿಗಳು ಹೊಸ ಕವಿಷನ್ ನೇಮಕ ಮಾಡುವ ಅವಶ್ಯಕತೆ ಇದೆಯೇ ? ಈಗಾಗಲೇ ೩ ವರ್ಷಗಳಾಗಿದ್ದರೂ ಕೂಡಾ.....

ಅಧ್ಯಕ್ಷರು.—ಮುಂದಿನ ಗಮನ ಸೆಳೆವ ಸೂಚನೆ ಬಗ್ಗೆ ಮಾನ್ಯ ಬೊಮ್ಮಾಯಿಯವರು ಟೈಮ್ ಕೇಳಿದ್ದಾರೆ. ಉತ್ತರವನ್ನು ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡಲಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಯಾವಾಗ ?

ಅಧ್ಯಕ್ಷರು.—ನಿಮ್ಮ ಚುಕ್ಕೆ ಪ್ರಶ್ನೆಗಳು, ಚುಕ್ಕೆರಹಿತ ಪ್ರಶ್ನೆಗಳು, ಗಮನ ಸೆಳೆವ ಸೂಚನೆಗಳು ಹಾಗೂ ನಿಯಮ ೩೫೪ರ ಕೆಳಗಿನ ಸೂಚನೆಗಳಿಗೆಲ್ಲಾ ಉತ್ತರವನ್ನು ದೊರಕಿಸಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈ ರೀತಿ ಕೊನೆವರೆಗೆ ಪೊಡಿಂಗ್ ಇಟ್ಟು.....(ಗೊಂದಲ) ಮರೆಮಾಚಬೇಕೆಂದು ಸರ್ಕಾರದ ಧೋರಣೆಯೇ ? I strongly protest this attitude.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಹೇಳುತ್ತಿರುವುದೆಲ್ಲಾ ರೆಕಾರ್ಡ್‌ಗೆ ಹೋಗುತ್ತಿದೆ.

MR. SPEAKER.—The questions and reply are over ಎಂದು ಹೇಳಿದ್ದೇನೆ. ಇಷ್ಟೂ ಹೇಳಿದ ಮೇಲೂ ಅವರು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಪ್ರಶ್ನೋತ್ತರ ಮೇಲೆ ಮುಗಿಯಿತು ಎಂದಿದ್ದೇನೆ. ಖಾರ್ಗೆಯವರ ಗಮನ ಸೆಳೆವ ಸೂಚನೆಗೆ ಉತ್ತರವನ್ನು ಅವರ ಊರಿಗೆ ಕಳುಹಿಸಿಕೊಡುತ್ತೇನೆ. ಈಗ ವಸಂತ ವಿ. ಸಾಲಿಯಾನಾ ಅವರ ವಿಷಯ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಬೊಮ್ಮಾಯಿಯವರು ಇಲ್ಲೇ ಇದ್ದಾರೆ. ಅವರು ಸದನದಲ್ಲೆ ಅಡ್ಡಾಡುತ್ತಿದ್ದಾರೆ. ಐ ಆಮ್ ವೆರಿ ಸಾರಿ. ಇದಕ್ಕೆ ಅವರು ಉತ್ತರ ಕೊಡಬೇಕು. ಉತ್ತರವನ್ನು ಏತಕ್ಕೆ ಊರಿಗೆ ಕಳುಹಿಸುತ್ತಿರಿ ?

ಅಧ್ಯಕ್ಷರು.—ಉತ್ತರ ಯಾವಾಗ ಕೊಡುತ್ತೀರಿ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಇಲ್ಲೇ ಇದ್ದೇನೆ. ಈ ಬಗ್ಗೆ ಜಿಲ್ಲಾಧಿಕಾರಿಗಳವರಿಗೆ ಟೆಲೆಕ್ಸ್ ಕೊಟ್ಟಿದ್ದೇನೆ. ಅವರಿಗೆ ಚುನಾವಣೆಯ ಕೆಲಸ ಇದ್ದುದರಿಂದ ಉತ್ತರ ಕಳುಹಿಸಲಿಕ್ಕೆ ತಡವಾಗಿದೆ. ಈ ವಿಷಯದ ಮೇಲೆ ಪ್ರಸ್ತಾಪ ಮಾಡಲಿ, ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಯಾವಾಗ ಉತ್ತರ ಕೊಡುತ್ತೀರಿ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಈಗ ಉತ್ತರ ಕೊಡುತ್ತೇನೆ. ಲಿಖಿತ ಮೂಲಕ ಉತ್ತರ ಕೊಡಲಿಕ್ಕೆ ಆಗಲಿಲ್ಲ, ಈಗ ಉತ್ತರ ಕೊಡುತ್ತೇನೆ.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ ಮಂತ್ರಿಗಳು ಉತ್ತರ ಕೊಡಲಿಕ್ಕೆ ರೆಡಿ ಇದ್ದಾರೆ, ತಾವು ಏತಕ್ಕೆ ಹೀಗೆ ಮಾಡುತ್ತೀರಿ ?

ಅಧ್ಯಕ್ಷರು.—ಅವರು ಆ ರೀತಿ ಪತ್ರ ಬರೆದಿದ್ದಾರೆ ಆದ್ದರಿಂದ ಹೇಳಿದೆ. ಈಗ ನಿಯಮ ೩೫೪. ಈ ವಿಷಯ ಇಲ್ಲಿಗೆ ಮುಕ್ತಾಯವಾಯಿತು. ವಸಂತ ವಿ. ಸಾಲಿಯಾನ ಅವರು ಈಗ ತಮ್ಮ ನೋಟೀಸ್ ಬಗ್ಗೆ ಪ್ರಸ್ತಾಪ ಮಾಡಬಹುದು.

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧ್ಯಕ್ಷರೇ,

ಅಧ್ಯಕ್ಷರು.—ಪ್ರಸ್ತಾಪವನ್ನು ಮಂಡಿಸುತ್ತಿದ್ದೀರಾ ?

MOTION FOR APPOINTMENT OF A SELECT COMMITTEE

Ref. The utilisation of water resources of the State.

ಶ್ರೀ ಎಸ್.ಆರ್. ಬೊಮ್ಮಾಯಿ.—ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ನೀರಾವರಿ ವಿಚಾರದಲ್ಲಿ ಸದನದ ಒಂದು ಸಮಿತಿಯನ್ನು ನೇಮಕ ಮಾಡತಕ್ಕಂಥ ಮಾತನ್ನು ಕೊಟ್ಟಿದ್ದರು. ಅದನ್ನು ಈಗ ರೂಲ್ ೧೫೮ ಕೆಳಗೆ ಮೂವ್ ಮಾಡುತ್ತಿದ್ದೇನೆ. ''ರಾಜ್ಯದ ಜಲಸಂಪತ್ತನ್ನು ಪೂರ್ತಿಯಾಗಿ ನಿಗದಿತ ಸಮಯದಲ್ಲಿ ಬಳಸಿಕೊಳ್ಳಲಿಕ್ಕೆ ಸರ್ಕಾರಕ್ಕೆ ಸಲಹೆ ನೀಡಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ರಾಜ್ಯದ ನೀರಾವರಿ ಸಮಸ್ಯೆಗಳ ಪರಿಹಾರ ಸೂಚಕ ಸದನದ ಸಮಿತಿಯನ್ನು ನಿಯಮ ೧೫೮ರ ಮೇರೆಗೆ ರಚಿಸಲಿಕ್ಕೆ ಈ ಸಭೆಯು ಅನುಮತಿಯನ್ನು ಕೋರುತ್ತೇನೆ.

(೧)	ಶ್ರೀ ಎಸ್.ಆರ್. ಬೊಮ್ಮಾಯಿ,	—ನೀರಾವರಿ ಸಚಿವರು, ಅಧ್ಯಕ್ಷರು.
(೨)	ಶ್ರೀ ಹೆಚ್.ಡಿ. ದೇವೇಗೌಡ	ಸದಸ್ಯರು
(೩)	ಶ್ರೀ ಎಸ್.ಎಸ್. ಕೆಡಪಟ್ಟಿ	—,,—
(೪)	ಶ್ರೀ ಎಂ.ಎಲ್. ಮುತ್ತಣ್ಣನವರ್	—,,—
(೫)	ಶ್ರೀ ಜೆ.ಎಸ್. ದೊಡ್ಡಮೇಟಿ.	—,,—
(೬)	ಶ್ರೀ ಹೆಚ್.ಸಿ. ಮಹದೇವಪ್ಪ.	—,,—
(೭)	ಶ್ರೀ ಬಸವರಾಜ ಪಾಟೀಲ್ ಅಟ್ಟೂರ್.	—,,—
(೮)	ಶ್ರೀ ಕೃಷ್ಣ.	—,,—
(೯)	ಶ್ರೀ ಎಂ.ಎಸ್. ಪಾಟೀಲ್.	—,,—
(೧೦)	ಶ್ರೀ ಪಿ.ಎನ್. ಭಾಸ್ಕರಪ್ಪ.	—,,—
(೧೧)	ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.	—,,—
(೧೨)	ಶ್ರೀ ಕೆ.ಹೆಚ್. ಪಾಟೀಲ್.	—,,—
(೧೩)	ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.	—,,—
(೧೪)	ಶ್ರೀ ಎಂ.ಎಸ್. ಕೃಷ್ಣನ್.	—,,—
(೧೫)	ಶ್ರೀ ಆರ್. ವೆಂಕಟರಾಮಯ್ಯ.	—,,—
(೧೬)	ಶ್ರೀ ಬಿ.ಎಸ್. ಯಡಿಯೂರಪ್ಪ.	—,,—
(೧೭)	ಶ್ರೀ ಕೆ.ಬಿ. ಕೋಳಿವಾಡ್.	—,,—

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ ''ರಾಜ್ಯದ ಜಲಸಂಪತ್ತನ್ನೂ ಪೂರ್ತಿಯಾಗಿ ನಿಗದಿತ ಸಮಯದಲ್ಲಿ ಬಳಸಿಕೊಳ್ಳಲಿಕ್ಕೆ ಸರ್ಕಾರಕ್ಕೆ ಸಲಹೆ ನೀಡಲು ಮೇಲ್ಕಂಡ ಸದಸ್ಯರುಗಳನ್ನೊಳಗೊಂಡ ರಾಜ್ಯದ ನೀರಾವರಿ ಸಮಸ್ಯೆಗಳ ಪರಿಹಾರ ಸೂಚಕ ಸದನದ ಸಮಿತಿಯನ್ನು ನಿಯಮ ೧೫೮ರ ಮೇರೆಗೆ ಮೇಲೆ ಕಾಣಿಸಿದಂತೆ ೧೭ ಜನರ ಸಮಿತಿ ರಚನೆಗೆ ಸಭೆಯು ಅನುಮತಿಯನ್ನು ನೀಡುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಸಮಿತಿ ರಚನೆಗೆ ಅನುಮತಿಯನ್ನು ನೀಡಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಬೊಮ್ಮಾಯಿಯವರು ಬಹಳ ಸಮಯದಿಂದ ದೇವೇಗೌಡರು ಮತ್ತು ಭಿನ್ನಮತೀಯರೊಂದಿಗೆ ಮತ್ತು ಲಾಯಲಿಸ್ಟ್ ಇವರ ಜೊತೆಯಲ್ಲಿ ಒಂದು ದೊಡ್ಡ ಫಾರ್ಮುಲಾ ಮಾಡುತ್ತೇವೆ ಎಂದು ರಾಜಿ ಮಾಡುತ್ತೇವೆ ಎಂದು ಹೇಳಿದರು. ರಾಜಿ ಸೂತ್ರ ಇದೇ ಇರಬೇಕು. ಇದರಿಂದ ದೇವೇಗೌಡ ಅವರ ಪಂಗಡದವರಿಗೆ ಬಹಳ ತೃಪ್ತಿಯಾಗಿರಬೇಕು.

ಅಧ್ಯಕ್ಷರು.—ಇದರಲ್ಲಿ ನಿಮ್ಮವರೂ ಇದ್ದಾರೆ. You must compliment the Government...ಈಗ ನಿಯಮ ೨೩೪. ಶ್ರೀ ಪಸಂತ ವಿ. ಸಾಲಿಯಾನ—ಗೈರುಹಾಜರಿ—ನೆಕ್ಸ್ಟ ಶ್ರೀ ಗೋಪಾಲ ಮುಕುಂದ ಕಾನಡೆ—ಗೈರುಹಾಜರಿ—ನೆಕ್ಸ್ಟ ಶ್ರೀ ಕುಲಕರ್ಣಿ—ಗೈರುಹಾಜರಿ—ನೆಕ್ಸ್ಟ ಶ್ರೀ ಬಿ.ಹೆಚ್. ಯಂಕನಾಯಕ್ ಮತ್ತು ಶ್ರೀ ಆರ್. ವೆಂಕಟರಾಮಯ್ಯನವರು.